sdmimd

Vijaya Karnataka

**Date:** November 14, 2014 **Page No.** 03

**Edition:** Mysore **Language: Kannada**

ಎಸ್‌ಡಿಎಂ ಐಎಂಡಿಯಲ್ಲಿ ಸಾಮಾಜಿಕ ಹೊಣೆಗಾರಿಕೆ ಕುರಿತ ಎರಡು ದಿನಗಳ ಸಮ್ಮೇಳನ ಉದ್ಘಾಟನೆ

# ಸಿಎಸ್‌ಆರ್ ಹಣ ಸದ್ವಿನಿಯೋಗ ಅಗತ್ಯ

**ವಿಕ ಸುದ್ದಿಲೋಕ,** ಮೈಸೂರು

ಕ್ಯಾಂಪಸ್

'ಕಾರ್ಪೊರೇಟ್ ಸಂಸ್ಥೆಗಳ ಆದಾಯದ ಭಾಗವಾಗಿರುವ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆಯ ಹಣ(ಸಿಎಸ್‌ಆರ್) ಅಗತ್ಯ ಇರುವವರಿಗೆ ಸದ್ವಿನಿಯೋಗ ವಾಗುವಂತೆ ನೋಡಿಕೊಳ್ಳುವ ಹೊಣೆ ಗಾರಿಕೆ ಆಯಾ ಸಂಸ್ಥೆಗಳದ್ದು' ಎಂದು ಟಾಟಾ ಕನ್ಸಲ್ಟಿಂಗ್ ಎಂಜಿನಿಯರ್ಸ್‌ನ ಎಂಡಿ ಜೆಪಿ ಹರನ್ ಸಲಹೆ ನೀಡಿದರು.

ಚಾಮುಂಡಿಬೆಟ್ಟ ತಪ್ಪಲಿನ ಎಸ್‌ಡಿಎಂ ಐಎಂಡಿಯಲ್ಲಿ ಗುರುವಾರ ಆರಂಭವಾದ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ, ಪ್ರಗತಿಗಾಗಿ ಇರುವ ವಿಧಾನಗಳು ಹಾಗೂ ಆಚರಣೆಗಳು ಎನ್ನುವ ಕುರಿತ ಎರಡು ದಿನಗಳ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಕಾರ್ಪೊರೇಟ್ ಸಂಸ್ಥೆ ತನ್ನ ಆದಾಯದಲ್ಲಿ ಶೇ.2ರಷ್ಟನ್ನು ಸಾಮಾಜಿಕ ಹೊಣೆಗಾರಿಕೆಗಾಗಿ ಮೀಸಲಿಡಬೇಕು. ಜತೆಗೆ ಅದನ್ನು ನಿಜಾರ್ಥದಲ್ಲಿ ಸಾಮಾಜಿಕ ಚಟುವಟಿಕೆಗಳಿಗೆ ಬಳಸಬೇಕು ಎನ್ನುವ ಕಾನೂನು ರೂಪಿಸಲಾಗಿದೆ. ಅದರಂತೆ ಈಗಾಗಲೇ ಎಲ್ಲಾ ಸಂಸ್ಥೆಗಳು ಇಂಥ ಹಣವನ್ನು ಮೀಸಲಿಟ್ಟು ಖರ್ಚನ್ನು ಮಾಡುತ್ತಿವೆ. ಆದರೆ ಅದರ ಸದ್ವಿನಿಯೋಗ ಎಷ್ಟರ ಮಟ್ಟಿಗೆ ಆಗುತ್ತಿದೆ. ಅದರಲ್ಲೂ ಅರ್ಹರಿಗೆ ತಲುಪುತ್ತಿದೆ. ಈ ಹಣದಿಂದ ಎಷ್ಟು ಪ್ರಗತಿಯಾಗಿದೆ ಎನ್ನುವ ಕುರಿತು ನಿಗಾ ಇಡುವುದು ಅತ್ಯಗತ್ಯ' ಎಂದರು.

'ಸಾಂಸ್ಥಿಕ ಹೊಣೆಗಾರಿಕೆ ಎಂದರೆ ಅದು ಬರೀ ಹಣ ನೀಡುವುದು ಅಲ್ಲವೇ ಅಲ್ಲ. ಯಾರಿಗೆ ಅತ್ಯಗತ್ಯವಿದೆ ಎನ್ನುವುದನ್ನು ಮೊದಲು ಸಮೀಕ್ಷೆ ಮಾಡಿ ಅಂಥ ಸಂಸ್ಥೆ, ವ್ಯಕ್ತಿಗಳಿಗೆ ನೀಡಬೇಕು. ಇದಕ್ಕಾಗಿ ಸಂಸ್ಥೆಗಳು ತಮ್ಮ ಆಡಳಿತವನ್ನು ವಿಸ್ತರಣೆ ಮಾಡಬೇಕು. ಇದರ ಹಿಂದೆ ರಾಜಕೀಯದ ವಾಸನೆ ಇರಬಾರದು. ಅತಿ ಬೇಗನೇ ಹಣ ತಲುಪಿ ಅದರಿಂದ ಸಮಾಜಕ್ಕೆ ಉಪಯೋಗ ವಾಗುವಂತೆ ನೋಡಿ ಕೊಳ್ಳಬೇಕು' ಎಂದು ನುಡಿದರು.

'ಯಾವುದೇ ಸಂಸ್ಥೆ ಸಿಎಸ್‌ಆರ್ ಹಣವನ್ನು ವಿನಿಯೋಗ ಮಾಡುವಾಗ ಸಂಸ್ಥೆಯ ಬ್ರಾಂಡ್ ಇಮೇಜ್ ವೃದ್ಧಿಸಿಕೊಳ್ಳಲು ಸಹಜವಾಗಿಯೇ ಪ್ರಯತ್ನಿಸುತ್ತದೆ. ಅದು ತಪ್ಪಲ್ಲ. ಸಾಮಾಜಿಕ ಹೊಣೆಗಾರಿಕೆಯೇ ಸಮರ್ಪಕವಾಗಿ ಈಡೇರದೇ ಇಮೇಜ್ ವೃದ್ಧಿಸಿಕೊಂಡರೆ, ಅದರಿಂದ ಉಪಯೋಗವಾದರೂ ಏನು ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ತಳ ಹಂತದವರೆಗೂ ಫಲ ಸಿಕ್ಕರೆ ಉದ್ದೇಶ ಈಡೇರಿದ ಸಾರ್ಥಕತೆಯೂ ಇರುತ್ತದೆ. ಜತೆಗೆ ಪರಿಸರ ಹಾನಿ, ಮಾಲಿನ್ಯಕ್ಕೆ ಅವಕಾಶ ಮಾಡಬಾರದು' ಎಂದು ಹೇಳಿದರು.

'ಸರಕಾರವೇ ಈಗಾಗಲೇ ಸಾಮಾಜಿಕ ಹೊಣೆಗಾರಿಕೆಯ ಹಣದ ಬಳಕೆಗೆ ಕಂಪೆನಿ ನಿಯಮಾವಳಿಗಳನ್ನು ರೂಪಿಸಿದೆ. ಅದರಲ್ಲಿ ಸಾಕಷ್ಟು ಬದಲಾವಣೆಗಳೂ ಆಗಿವೆ. ಇಂಥ ನಿಯಮಾವಳಿಗಳನ್ನು ಉಲ್ಲಂಘಿಸದಾಗೆ ಯೋಜನೆ ರೂಪಿಸಬೇಕು. ಇದಕ್ಕಾಗಿ ಕಾರ್ಯ ಯೋಜನೆ ರೂಪಿಸಿಕೊಳ್ಳುವುದು ಅತ್ಯಗತ್ಯ. ಕಾಲ ಕಾಲಕ್ಕೆ ಹಣ ಬಳಕೆಯಾದ ಮೌಲ್ಯ ಮಾಪನವೂ ನಡೆಯಬೇಕು. ಸಮರ್ಪಕ ಕಾರ್ಯಯೋಜನೆ ಇಲ್ಲದೇ ಹೋದರೆ ಉಪಯೋಗವೂ ಆಗುವುದಿಲ್ಲ, ಇದಕ್ಕಾಗಿ ಕ್ಷೇತ್ರದಲ್ಲಿ ಹೆಸರು ಮಾಡಿರುವ ವಿಶ್ವಾಸಾರ್ಹ ಸ್ವಯಂಸೇವಾ ಸಂಘಟನೆಗಳ ಉಪಯೋಗವನ್ನೂ ಪಡೆಯಬೇಕು' ಎಂದು ನುಡಿದರು.

'ನೆರೆಯಿಂದ ದೇಶದ ಹಲವಾರು ಭಾಗಗಳಲ್ಲಿ ಜನ ಮನೆ ಕಳೆದುಕೊಂಡರು. ಆಗ ಕಾರ್ಪೊರೇಟ್ ಸಂಸ್ಥೆಗಳೂ ಕೈ ಚಾಚಿದವು. ಆಗ ನಿರ್ಮಿಸಿದ ಮನೆಗಳಿಗೆ ಹೋಗಲು ಬಹಳಷ್ಟು ಮಂದಿ ಇಷ್ಟವೇ ಪಡಲಿಲ್ಲ. ಅಲ್ಲಿನವರಿಗೆ ಅಗತ್ಯಗಳಿಗೆ ತಕ್ಕಂತೆ ಯೋಜನೆ ರೂಪುಗೊಳ್ಳಬೇಕಿತ್ತು. ಸಾಮಾಜಿಕ ಸಂರಚನೆ, ಸ್ಥಳೀಯ ಬೇಡಿಕೆಗಳನ್ನು ಮನಸಿನಲ್ಲಿಟ್ಟುಕೊಳ್ಳುವುದು ಸೂಕ್ತ. ಶಾಲೆಗಳಿಗೆ ಕಟ್ಟಡ ನಿರ್ಮಿಸುವಾಗ ಸುರಕ್ಷತೆಗೆ ಒತ್ತು ನೀಡದೇ ಇದ್ದರೆ ಅದೇ ಅನಾಹುತಕ್ಕೆ ದಾರಿ ಮಾಡಿಕೊಡಬಹುದು' ಎಂದು ಉದಾಹರಣೆ ನೀಡಿದರು.

ಬೇರೆ ಬೇರೆ ಕ್ಷೇತ್ರದ ತಜ್ಞರಾದ ಶಚಿ ಇರ್ದೆ, ಪ್ರೀತಿ ಪಾರೇಖ್ ಮೊದಲ ದಿನ ವಿಚಾರ ಮಂಡಿಸಿದರು. ಕೋಪೆಲ್ ಅಂಬಾ, ಡಾ.ಬಿ.ಆರ್.ಪೈ, ಜೋಸೆಫ್ ಸುನೀಲ್, ಡಾ.ಎಚ್.ಎಲ್.ಮಂಜುನಾಥ್ ಶುಕ್ರವಾರ ಅಭಿಪ್ರಾಯ ಹಂಚಿಕೊಳ್ಳುವರು. ಸಮ್ಮೇಳನದ ಅಧ್ಯಕ್ಷತೆ ಡಾ.ಎಚ್.ಗಾಯತ್ರಿ, ಸಹ ಅಧ್ಯಕ್ಷರಾದ ಡಾ.ಎಂ.ಆರ್.ಸುರೇಶ್, ಪ್ರೊ. ಗೋವಿಂದ ಶರ್ಮ, ಸಂಸ್ಥೆ ನಿರ್ದೇಶಕ ಎನ್. ಆರ್.ಪರುಶರಾಮನ್ ಹಾಜರಿದ್ದರು.





ಮೈಸೂರಿನ ಎಸ್‌ಡಿಎಂ ಐಎಂಡಿಯಲ್ಲಿ ಗುರುವಾರ ಆರಂಭವಾದ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ, ಪ್ರಗತಿಗಾಗಿ ಇರುವ ವಿಧಾನಗಳು ಹಾಗೂ ಆಚರಣೆಗಳು ಎನ್ನುವ ಕುರಿತ ಎರಡು ದಿನಗಳ ಸಮ್ಮೇಳನವನ್ನು ಉದ್ಘಾಟಿಸಿ, ಟಾಟಾ ಕನ್ಸಲ್ಟಿಂಗ್ ಎಂಜಿನಿಯರ್ಸ್‌ನ ಎಂಡಿ ಜೆಪಿ ಹರನ್ ಮಾತನಾಡಿದರು. ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.